# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **148** |
| ಮಾನ್ಯ ಸದಸ್ಯರ ಹೆಸರು | ಶ್ರೀ ಯು.ಬಿ. ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | **16-07-2019** |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಶಕ್ತಿ ಕೇಂದ್ರವಾದ ವಿಧಾನ ಸೌಧ ಹಾಗೂ ವಿಕಾಸಸೌಧ ಸುತ್ತಮುತ್ತ ಹೈಕೋರ್ಟ್, ಬಹುಮಹಡಿ ಕಟ್ಟಡ, ವಿಶ್ವೇಶ್ವರಯ್ಯ ಕಟ್ಟಡ, ರಾಜಭವನ, ಮುಖ್ಯಮಂತ್ರಿಗಳು ಹಾಗೂ ಸಚಿವ ಸಂಪುಟ ಸದಸ್ಯರ ವಸತಿ ಗೃಹಗಳು ಮತ್ತು ಕಚೇರಿಗಳು ಕಾರ್ಯನಿರ್ವಹಿಸುತ್ತಿದ್ದು, ಗಣ್ಯರು ಒಳಗೊಂಡಂತೆ ಹತ್ತಾರು ಸಾವಿರ ಅಧಿಕಾರಿ / ನೌಕರರು ದಿನನಿತ್ಯ ಕರ್ತವ್ಯದಲ್ಲಿ ತೊಡಗಿಕೊಂಡಿರುವುದರಿಂದ ಇವರೆಲ್ಲರ ಆರೋಗ್ಯ ಭದ್ರತೆ ಸಲುವಾಗಿ ಒಂದು '108' ಆಂಬ್ಯುಲೆನ್ಸ್ ದಿನದ 24 ಗಂಟೆ ಅವಶ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಬಂದಿದೆ.<br><br>ವಿಧಾನ ಸೌಧ, ವಿಕಾಸಸೌಧ, ಹೈಕೋರ್ಟ್, ಬಹುಮಹಡಿ ಕಟ್ಟಡ ಹಾಗೂ ವಿಶ್ವೇಶ್ವರಯ್ಯ ಕಟ್ಟಡದ ಸುತ್ತಮುತ್ತಲು ದಿನದ 24 ಗಂಟೆಗಳು ತುರ್ತು ಆರೋಗ್ಯ ಸೇವೆ ನೀಡಲು 108-ಆರೋಗ್ಯ ಕವಚ ಸೇವೆಯ ಒಂದು ಆಂಬ್ಯುಲೆನ್ಸ್ ವಾಹನವನ್ನು ಶಾಸಕರ ಭವನದ ಆವರಣದಲ್ಲಿ ಒದಗಿಸಲಾಗಿದೆ.<br><br>ರಾಜಭವನದ ಒಳ ಆವರಣದಲ್ಲಿ ತುರ್ತು ಆರೋಗ್ಯ ಸೇವೆ ನೀಡಲು 108-ಆರೋಗ್ಯ ಕವಚ ಸೇವೆಯ ಒಂದು ಆಂಬ್ಯುಲೆನ್ಸ್ ವಾಹನವನ್ನು ಒದಗಿಸಲಾಗಿದೆ. |
| ಆ) | ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | |

**ಆಕುಕ 01 ಎಸ್‌ಬಿವಿ 2019**

(ಶಿವಾನಂದ ಎಸ್ ಪಾಟೀಲ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು